ಅರಮನೆಯಲ್ಲಿದ್ದ ರಾಣಿಯರಾದಿಯಾಗಿ ಅನೇಕರಿಗೆ ಅದು ಒಂದು ರೀತಿಯ ವೈಭವೋಪೇತ ಜೈಲು; ಹೊರಗೆ ಹೋಗದೆ ಒಳಗಿದ್ದೇ ಶ್ರೀಮಂತಿಕೆಯ ವೈಭವವನ್ನೇ ಉಸಿರಾಗಿಸಿಕೊಂಡು ಭ್ರಮೆಯಲ್ಲಿ ಬದುಕಬೇಕಾದ ಜೈಲುಗಳಲ್ಲವೆ ಅನೇಕ ಅರಮನೆಗಳು! ಜನ ಸಂಪರ್ಕವಿಲ್ಲದ ಜೈಲುಗಳು! ರಾಜರಿಗೆ ಮಾತ್ರ ಒಳಗೆ, ಹೊರಗೆ ಉಸಿರು; ರಾಣಿಯರಿಗೆ ಒಳಗಷ್ಟೇ ಆವರಿಸಿದ ಉಸಿರು! ಹೊರಗೆ ಅನುಭವಿಸದ ಹಸಿರು!

ಈಗ ಹಳೆಯ ಅರಮನೆಗಳ ವಿಷಯ ಹಾಗಿರಲಿ. ಆಗಾಖಾನ್ ಅರಮನೆಯು ಜೈಲಾದದ್ದಂತೂ ನಿಜ. ಬ್ರಿಟಿಷರ ವಿರುದ್ಧ 'ಮಾಡು ಇಲ್ಲವೆ ಮಡಿ' ಎಂದು ಕರೆಕೊಟ್ಟ ಗಾಂಧಿ, ಅಸಹಕಾರ ಚಳವಳಿ ಆರಂಭಿಸಿ, ಬಂಧಿತರಾದಾಗ ಅವರನ್ನು ಆಗಾಖಾನ್ ಅರಮನೆಯಲ್ಲಿಟ್ಟು, ಅದನ್ನು ಗೃಹಬಂಧನದ ಜೈಲಾಗಿ ಪರಿವರ್ತಿಸಿತ್ತು ಬ್ರಿಟಿಷ್ ಸರ್ಕಾರ. ಗಾಂಧಿಯವರ ಗೈರುಹಾಜರಿಯಲ್ಲಿ ಚಳವಳಿಯಲ್ಲಿ ಸಕ್ರಿಯರಾದ ಗಾಂಧಿ ಪತ್ನಿ ಕಸ್ತೂರ್‌ಬಾ ಅವರನ್ನೂ ಬಂಧಿಸಿ, ಮೊದಲು ಅರ್ತೂರು ರಸ್ತೆಯ ಸಣ್ಣದಾದ ಸಾಮಾನ್ಯ ಜೈಲಲ್ಲಿಟ್ಟು, ಆನಂತರ ಆಗಾಖಾನ್ 'ಜೈಲ್'ಗೆ ಸ್ಥಳಾಂತರಿಸಲಾಗಿತ್ತು.

ಈ 'ಜೈಲಿನಲ್ಲಿ' 1944ರ ಫೆಬ್ರುವರಿ 22ರಂದು ಕಸ್ತೂರ್‌ಬಾ ನಿಧನರಾದರು. ಅದೇ ಕಟ್ಟಡದ ಆವರಣದಲ್ಲಿ ಫೆಬ್ರುವರಿ 23ರಂದು ಅಂತ್ಯಕ್ರಿಯೆ ನಡೆಯುತ್ತಿದೆ. ಅಂತ್ಯಕ್ರಿಯೆಗೆ ಬಂದವರು ಹೆಚ್ಚುಕಾಲ ಆವರಣದಲ್ಲಿ ಇರುವಂತಿಲ್ಲ. ಅವರೆಲ್ಲ ಹೋಗಲೇಬೇಕಿತ್ತು. ಆದರೆ ಗಾಂಧಿಯವರನ್ನು ಬಿಟ್ಟು ಹೋಗಲು ಅವರಾರಿಗೂ ಮನಸ್ಸಿಲ್ಲ. ಹಾಗೆಂದು ಅವರು ಅಲ್ಲೇ ಇರುವಂತಿಲ್ಲ. ಗಾಂಧಿ ಮಾತ್ರ ಹೊರಹೋಗುವಂತಿಲ್ಲ. 'ಬಾಳಬಂಧನ'ದಿಂದ ಬಿಡುಗಡೆ ಹೊಂದಿದ ಕಸ್ತೂರ್ ಬಾ ಅವರ ಬೂದಿಯನ್ನು ಅಲ್ಲೇ ಬಿಟ್ಟು ಬಂಗಲೆಯೊಳಗೆ ಹೋಗಿ ಬಂಧಿಯಾಗಲೇಬೇಕಿತ್ತು. ಆಗಾಖಾನ್ ಬಂಗಲೆ ಮತ್ತೆ ಜೈಲು ಅನ್ನಿಸಿಕೊಳ್ಳಲೇಬೇಕಿತ್ತು.

ಗಾಂಧಿ ನಿಂತೇ ಇದ್ದರು. ಕಣ್ಣಲ್ಲಿ ನೀರು;

ಮನುಷ್ಯಮಾತ್ರನಾದ ಮಹಾತ್ಮ!

ಎದುರಿಗೆ ಬೆಂಕಿ ಉರಿದುರಿದು ಬೂದಿಯಾಯಿತು;

ಬೂದಿಯೇ ಎದೆಹೊಕ್ಕು ಬಯಲಾಯಿತು.

ಕಣ್ಣಲ್ಲಿ ಭೂತಬರಹ ಹನಿಯಾಯಿತು.

ಗಾಂಧಿ, ತನ್ನ ಜೊತೆಯಲ್ಲಿ ಇದ್ದವರಿಗೆ ಮರಳುವಂತೆ ಸನ್ನೆ ಮಾಡಿದರು. ಹೋಗಲಾರದೆ ಹೋದ ಅವರ ಕಡೆ ಗಾಂಧಿ ನೋಡಲಿಲ್ಲ. ತನಗೆ ಎದುರಾಗುತ್ತಲೇ ಒಳಗೊಳ್ಳುತ್ತಿದ್ದ ಮುಖಾಮುಖಿಯ ಶಕ್ತಿಸ್ವರೂಪಿ ಸುಟ್ಟು ಮೌನವಾದದ್ದನ್ನು ಅವರಿಗೆ ತಡೆದುಕೊಳ್ಳಲು ಆಗಲಿಲ್ಲ. ವೇದನೆಯೇ ಸಂವೇದನೆಯಾದ ಮನದುರಿಯಲ್ಲಿ ಮತ್ತು ಮೌನಯಾತನೆಯಲ್ಲಿ ನಿಜದ ನೆನಪುಗಳ ನವಿಲುಗರಿಗಳು ಸುಟ್ಟಿದ್ದವು!

ಆತ್ಮವಿಮರ್ಶೆಗೆ ಹಚ್ಚುತ್ತಿದ್ದ ನಂದಾದೀಪ ನಂದಿಹೋಗಿತ್ತು. ಒಳಬೆಳಕು ಬಂಧಿಯಾಗಿತ್ತು. ಜನರ ನಡುವೆ ನಾಯಕರಾಗಿದ್ದ ಗಾಂಧಿಯವರ ಹೊರ ಆಕಾರ ಕುಸಿದಂತಾಗಿ, ಒಳಗು ಒಂಟಿಯಾಗಿ, ಬೆಳಗಿಲ್ಲದ ಭಾವ ಕಾಡತೊಡಗಿತ್ತು. ನಿಧಾನವಾಗಿ ಹೆಜ್ಜೆ ಹಾಕಿದರು. ಬಂಗಲೆಯ ಒಳಗೆ ಹೋಗಿ ಬಂಧಿಯಾಗಲೇಬೇಕಿತ್ತು. ಆದರೆ ಮನಸ್ಸನ್ನು ಬಂಧಿಸಲು ಯಾರಿಗೂ ಸಾಧ್ಯವಿಲ್ಲವಲ್ಲ!

ಗಾಂಧಿ ತನ್ನ ತುಂಬಿದ ಕಣ್ಣನ್ನು ಮುಚ್ಚಿ ದುಃಖವನ್ನು ತಡೆದುಕೊಳ್ಳಲು ಪ್ರಯತ್ನಿಸಿದರು. ಮುಚ್ಚಿದ ಕಣ್ಣಲ್ಲಿ ಮನಸ್ಸು ತೆರೆದುಕೊಂಡಿತು; ಯಾರಿಗೂ ಗೋಚರಿಸದ ಗಾಳಿಯಲ್ಲಿ ಗಾಳಿಯಾಗಿ ಸಬರಿಮತಿ ಆಶ್ರಮದತ್ತ ಸಾಗಿತು. 1915ರ ಜನವರಿಯಲ್ಲಿ ಭಾರತಕ್ಕೆ ಬಂದು, ಒಂದು ವರ್ಷ ಕಾಲ ದೇಶಸುತ್ತಾಡಿ, ಮೊದಲಿಗೆ ಕಟ್ಟಿದ ಈ ಆಶ್ರಮದಲ್ಲೇ ಎಲ್ಲ ಕಾಣಲು ಬಂದ ಗಾಂಧಿ ಮನ, ಮೈವೆತ್ತು ಕೂತಿತು.

* * *

ಕತ್ತಲು!

ಬೆಳಕಿನ ಬತ್ತಿ ಕರಕಲಾದ ಕತ್ತಲು;

ಕತ್ತಲಲ್ಲಿ ಬೆತ್ತಲಾಗಿ ನಿಂತ ಸಬರಮತಿ ಆಶ್ರಮ.

ಎಲ್ಲಾ ಖಾಲಿ ಖಾಲಿ; ಇಲ್ಲಿ ವಾಸವಿದ್ದು, ಅನಿವಾರ್ಯವಾಗಿ

ಬಿಟ್ಟು ವಾರ್ಧಾಕ್ಕೆ ಹೋದ ಮೇಲೆ ಮತ್ತೆ ಈಗ ಬರುವಂತೆ ಮಾಡಿದ

'ಮನಸ್ಸು' ಒಮ್ಮೆ ದಿಟ್ಟಿಸಿತು:

ಜಗಲಿಯಲ್ಲೊಂದು ಚರಕ

ಬದುಕು ನೇಯುವ ರೂಪಕ

ಕೂತಲ್ಲೇ ಕೂತ ಭೂತಕಾಲ

ಹೆಣೆದುಕೊಂಡ ಜೇಡರ ಜಾಲ!

ಗಾಂಧಿ ಕೂತರು; ಕತ್ತಲಲ್ಲೂ ಚರಕ ಬೆಳಕಿನಂತೆ ಕಂಡಿತು. ಆದರದು ಈಗ ಚಲನೆಯಿಲ್ಲದ ಚರಕ. ಹಾಗಾದರೆ ಬೆಳಕಿಗೆ ಚಲನೆಯಿಲ್ಲವೆ? ಇದೆ. ಆದರೆ ಗಾಂಧಿ, ಬೆಳಕನ್ನೂ ಹಿಡಿದು ಉಂಡೆ ಮಾಡಿ ಒಳಗಿಟ್ಟುಕೊಂಡರು; ಬೆಳಕಿನುಂಡೆಯನ್ನು ಬಿಡುಗಡೆ ಮಾಡುತ್ತ ಮೈತುಂಬಿಕೊಂಡರು. ಆದರೆ ಹೊರಗೆ ಕತ್ತಲು ಕೆನೆಯುತ್ತಲೇ ಇತ್ತು. ಒಳಗೆ ಬೆಳಕು ಬೆಳೆಯುತ್ತಲೇ ಇತ್ತು. ಕತ್ತಲಕುದುರೆ, ಬೆಳಕಿನ ಬೆಳ್ಳಕ್ಕಿ ಒಂದೆಡೆ ಸೇರಿದವು. ಕುದುರೆ ಮೇಲೆ ಕೂತ ಬೆಳ್ಳಕ್ಕಿ ದೂರಕ್ಕೆ ನೋಟ ಬೀರಿತು.

ತೊಟ್ಟಿಕ್ಕುವ ಹನಿಗೆ ಕಟ್ಟೆ ಕಟ್ಟದೆ ಕೂತಿದ್ದರು ಗಾಂಧಿ.

ಏನೆಲ್ಲವನ್ನ, ಯಾರೆಲ್ಲರನ್ನ, ಕಟ್ಟಿಹಾಕದ ಈ 'ಮಹಾತ್ಮ'ನೆಂಬ

ಮನುಷ್ಯನ ಮನಸ್ಸು ಮಗುವಾಗಿತ್ತು. ಕುದುರೆಮೇಲೆ

ಕೂತ ಬೆಳ್ಳಕ್ಕಿಯ ಬೆಳಕು ತೂರೆಯಾಗಿತ್ತು!

ಮೌನ; ಒಂಟಿತನ; ಸಂಕಟಯಾನ:

'ಬಾಪು' ಎಂದು ಕರೆದಂತಾಯಿತು! ಇದೇನು ಭ್ರಮೆಯೊ ವಾಸ್ತವವೊ ಗೊತ್ತಾಗದೆ ಹಾಗೇ ಕೂತಿದ್ದರು ಗಾಂಧಿ. ಮತ್ತೆ 'ಬಾಪು' ಎಂಬ ಕರೆ, ಅದೇ.. ಅದೇ... ದನಿ; ಆಕೆಯದೇ ಕಂಠ! ಕಣ್ತೆರೆದರು:

ಚರಕ ಚಲಿಸುತ್ತಿತ್ತು.

ಹಿಮ್ಮುಖವೋ ಮುಮ್ಮುಖವೋ ತಿಳಿಯಲಿಲ್ಲ.

'ಬಾಪು, ಇಲ್ನೋಡಿ; ಸರ್ರ್‍ಯಾಗ್ ನೋಡಿ, ನಾನು' ಮತ್ತೆ ಕೇಳಿಸಿದ ದನಿ;

ಚರಕದ ಜೊತೆ ಕಸ್ತೂರ್‌ಬಾ!

ವೃದ್ಧೆ ಕಸ್ತೂರ್ ಬಾ ಬಿಂಬ!

ತನ್ನರಿವಿಗೇ ಬಾರದಂತೆ ಗಾಂಧಿ 'ಕಸ್ತೂರ್' ಎಂದರು ಮೆಲುದನಿಯಲ್ಲಿ. 'ಹೌದು, ನಾನೇ, ಕಷ್ಟವಾದರೂ ಇಷ್ಟಪಟ್ಟು ಬದುಕಿದ ಕಸ್ತೂರ್‌ಬಾ ಗಾಂಧಿ ನಾನೇ' ಎಂದರು ಕಸ್ತೂರ್‌ಬಾ. ಅವರು ಅಲ್ಲಿಗೇ ಸುಮ್ಮನಾಗಲಿಲ್ಲ; ಕೆಣಕುವಂತೆ ಕೇಳಿದರು:

'ಯಾಕ್ ಬಾಪು, ನಿಮ್ ಕಣ್‌ತುಂಬಾ ನೀರು?'

ಬಾಪು ಗಾಂಧಿಗೆ ಏನು ಹೇಳಬೇಕೆಂದು ತಿಳಿಯಲಿಲ್ಲ.

ಯಾವತ್ತೂ ಹೀಗೆ ಕಣ್ಣೀರು ತುಂಬಿ ಬಂದಿರಲಿಲ್ಲ.

ಮತ್ತೆ ಕಸ್ತೂರ್‌ಬಾ ಕೇಳಿದರು ಅಥವಾ ಕೆಣಕಿದರು:

'ನನ್ ಕಣ್ಣೀರು ನಿಮ್ ಕಣ್ಣಲ್ ಬರ್‍ತಾ ಇದ್ಯಾ?'

ಆಗಲೂ ಗಾಂಧಿ ಉತ್ತರಿಸಲಿಲ್ಲ; ಉತ್ತರಿಸಲಾಗಲಿಲ್ಲ.

ಉತ್ತರಿಸಲಾಗದೆ ತತ್ತರಿಸಿದ ಕತ್ತರಿ ಮೌನ!

ಕಸ್ತೂರ್‌ಬಾ ಬಿಡಲಿಲ್ಲ.

'ನನ್ ಕಣ್ಣೀರು ನಿಮ್ಮ ಕಣ್ಣಲ್ ತುಂಬಿರೋದ್ರಿಂದ್ಲೆ ನನ್ನ ಕಣ್ಣು ಬತ್ತಿ ಹೋಗಿದೆ ಅನ್ಸುತ್ತೆ. ಈಗ ನನ್ ಕಣ್ಣಲ್ಲಿ ನೀರಿಲ್ಲ' ಎಂದರು.

ಗಾಂಧಿಗೆ ಸಂಕಟದ ಸುಳಿ;

ಕಸ್ತೂರ್‌ಬಾರಿಂದ ಮಾತಿನ ಉಳಿ!

ಉಳಿಯಲ್ಲಿ ಕೆತ್ತುತ್ತ, ಕಡೆಯುತ್ತ,

ಶಿಲೆಯು ನಿರ್ದಿಷ್ಟ ರೂಪ ತಾಳುತ್ತ

ಸಾಕಾರಗೊಂಡ ಆಕಾರದ ಅನುಭವ

ಇದು ಗಾಂಧಿ ಬದುಕಿನ ಅನುಭಾವ.

ಕಸ್ತೂರ್‌ಬಾ ಬಾಳಿನ ರೂಪಾಂಜಲಿ

ಅನುಭವದ ಹಾದಿಯ ತಾಪಾಂಜಲಿ!

ಈಗ ಗಾಂಧಿಗೆ ಸುಮ್ಮನಿರಲಾಗಲಿಲ್ಲ. ಸುಮ್ಮನಿರುವುದು ಸರಿಯೆಂದೂ ಅನ್ನಿಸಲಿಲ್ಲ. ಮುಖಾಮುಖಿಯಾಗುವುದೆ? ಮುನಿಸಿಕೊಂಡು ಸುಮ್ಮನಾಗುವುದೆ? ಈಗ ಎರಡೂ ಸರಿಯಲ್ಲ.

'ಹಾಗೆಲ್ಲ ಮಾತಾಡ್ ಬೇಡ ಕಸ್ತೂರ್, ಕರುಳಿನ ಮೇಲೆ ಕೆಂಡ ಬಿದ್ದಂತಾಗುತ್ತೆ' ಎಂದು ನಿವೇದಿಸಿದರು ಗಾಂಧಿ.

ಕಸ್ತೂರ್‌ಬಾ ತಕ್ಷಣವೇ ಪ್ರತಿಕ್ರಿಯಿಸಿದರು:

'ನನ್ ಕರುಳಲ್ಲೇ ಕೆಂಡ ಇದೆ. ನಾನು ಸುಡೋ ಕೆಂಡಕ್ಕೆ ಸೆಡ್ ಹೊಡ್ದು ಬದುಕ್ತಾ ಬಂದೆ ಅಲ್ವ ಬಾಪು. ಅದ್ರಲ್ಲೂ ನಿಮ್ ಜೊತೆ ಸಂಸಾರ ಅಷ್ಟು ಸುಲಭಾನ?'

'ಮತ್ತೆ ಹೀಗೆಲ್ಲ ಚುಚ್ಚಬೇಡ ಮನಸ್ಸನ್ನ, ನೋವಾಗುತ್ತೆ ಕಸ್ತೂರ್.'

'ನೋವು ನನ್ನ ನೆಂಟ ಅಂದ್ಕೊಂಡ್ ಬದುಕಿದವಳು ನಾನು. ಹೆಂಗಸರ ನೋವು ಗಂಡಸ್ರಿಗೆ – ಅದ್ರಲ್ಲೂ ನಿಮ್‌ತರಾ ಹಟವಾದಿ ಗಂಡಸ್ರಿಗೆ, ಸುಲಭವಾಗಿ ಅರ್ಥ ಆಗಲ್ಲ' ಎಂದು ಕಸ್ತೂರ್‌ಬಾ ನೇರ ನುಡಿದರು.

ಗಾಂಧಿಗೆ ಘಾಸಿಯಾದರೂ ಸಮಾಧಾನವಾಗಿಯೇ ಹೇಳಿದರು:

'ಅರ್ಥ ಆಗಿದೆ; ನೀನು ನನಗೆ ಅರ್ಥ